**ಓ.ಎಸ್.ನಂಃ 12/2021**

**ಪಿಡಬ್ಲ್ಯೂ-1**

**ಸಾಕ್ಷಿಯನ್ನು ಕರೆಯಿಸಿ ದಿನಾಂಕಃ 16.06.2026 ರಂದು ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: 8ನೇ ಪ್ರತಿವಾದಿ ಪರ ವಕೀಲರಿಂದಃ**

ದಿಃ 27.11.1994 ರಲ್ಲಿ ಮಾನ್ಯ ಮೈಸೂರು ಜಿಲ್ಲಾಧಿಕಾರಿಯವರು ಹಕ್ಕು ಪತ್ರ ಸಂಖ್ಯೆಃ 305/1984-85 ರಂತೆ ದಾವಾ ಸ್ವತ್ತಿನ ಹಕ್ಕುಪತ್ರವನ್ನು ಐದನೇ ಪ್ರತಿವಾದಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ದಾವಾಸ್ವತ್ತಿನ ದಕ್ಷಿಣ ದಿಕ್ಕಿಗೆ ಇರುವ ನಿವೇಶನ ಸಂಖ್ಯೆಃ 277 ನ್ನು ನಿಪಿ20 ರ ರೀತ್ಯಾ ನನಗೆ ಮಂಜೂರಾಗಿತ್ತು ಎಂದರೆ ಸಾಕ್ಷಿ ನಾನು ಹರಾಜಿನ ಮೂಲಕ ಖರೀದಿ ಮಾಡಿದ್ದೆ ಎಂದು ನುಡಿಯುತ್ತಾರೆ. ಸದರಿ ವಿಷಯವನ್ನು ವಾದ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ಸದರಿ ನಿವೇಶನ ಸಂಖ್ಯೆಃ 277 ನ್ನು ಗೃಹ ಕೃತ್ಯದ ಖರ್ಚಿಗಾಗಿ ಮಾರಾಟ ಮಾಡಿರುತ್ತೇನೆ. ನಿಪಿ20 ರ ರೀತ್ಯಾ ಬದಲಿ ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿದ್ದೇನೆ. ಆದರೆ ಸಂಬಂಧಪಟ್ಟ ಪ್ರಾಧಿಕಾರದವರು ನನಗೆ ಬದಲಿ ನಿವೇಶನ ಕೊಡಲಿಲ್ಲ. ನಾನು ಮುನ್ಸಿಪಾಲಿಟಿಯಲ್ಲಿ ದಾವಾ ಸ್ವತ್ತಿನ ಬಗ್ಗೆ ವಿಚಾರಿಸಲಾಗಿ ಅದು ಆರನೇ ಪ್ರತಿವಾದಿಯ ಹೆಸರಿನಲ್ಲಿ ದಾಖಲಾಗಿತ್ತು.

ದಾವೆ ದಾಖಲಿಸುವ ಆರು ತಿಂಗಳ ಮುನ್ನಾ ನಾನು ಪುರಸಭೆಗೆ ಹೋಗಿ ವಿಚಾರಿಸಿರುತ್ತೇನೆ. ಆಗ ನನಗೆ ಆರನೇ ಪ್ರತಿವಾದಿ ಹೆಸರಿನಲ್ಲಿ ದಾವಾ ಸ್ವತ್ತು ಇರುವುದು ತಿಳಿಯಿತು. ಕಟ್ಟಡ ನಿರ್ಮಿಸಲು ಅನುಮತಿ ಕೋರಿ ನಾನು ಪುರಸಭೆಗೆ ಹೋಗಲಿಲ್ಲ, ಆದರೆ ಖಾತಾ ಬದಲಾವಣೆ ಮಾಡುವ ಸಲುವಾಗಿ ನಾನು ಹೋದಾಗ ದಾವಾ ಸ್ವತ್ತು ಆರನೇ ಪ್ರತಿವಾದಿ ಹೆಸರಿನಲ್ಲಿ ಇರುವುದು ತಿಳಿಯಿತು. ನನಗೆ ಸೇಲ್ ಸರ್ಟಿಫಿಕೇಟ್ ದೊರೆತ ನಂತರ ಕಂದಾಯ ಕಟ್ಟಲು ಪ್ರಯತ್ನಿಸಿದ್ದೀರಾ ಎಂದರೆ ಸಾಕ್ಷಿ ದಾಖಲೆ ನನ್ನ ಹೆಸರಿನಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ಸುಮಾರು 15 ವರ್ಷಗಳ ಹಿಂದೆ ಕಂದಾಯ ಕಟ್ಟಲು ಪ್ರಯತ್ನ ಮಾಡಿದೆ, ಆ ಬಗ್ಗೆ ನಾನು ಅರ್ಜಿಯನ್ನು ಸಹ ನೀಡಿರುತ್ತೇನೆ. ಸದರಿ ಅರ್ಜಿಗಳು ನನ್ನ ಬಳಿ ಇಲ್ಲ. ದಾವೆ ಹೂಡುವ 25 ರಿಂದ 30 ದಿನಗಳ ಮೊದಲೇ ಋಣಬಾರ ಪತ್ರವನ್ನು ಪಡೆದುಕೊಂಡಿದ್ದೆ. ದಿಃ 04.01.2021 ರಂದು ಈ ದಾವೆ ದಾಖಲಾಗಿದೆ ಎಂದರೆ ನನಗೆ ನೆನಪಿಲ್ಲ.

8ನೇ ಪ್ರತಿವಾದಿ, 7ನೇ ಪ್ರತಿವಾದಿಯಿಂದ ದಿಃ 14.10.2019 ರಂದು ದಾವಾ ಸ್ವತ್ತನ್ನು ಖರೀದಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 8ನೇ ಪ್ರತಿವಾದಿ ದಾವಾ ಸ್ವತ್ತನ್ನು ಖರೀದಿ ಮಾಡಿದ 1 ವರ್ಷ, 2 ತಿಂಗಳು, 21 ದಿನಗಳ ನಂತರ ಈ ದಾವೆ ಹೂಡಿದ್ದೇನೆ ಎಂದರೆ ಸರಿ. ದಾವೆ ಹೂಡುವ ಮುನ್ನಾ 8ನೇ ಪ್ರತಿವಾದಿ ದಾವಾ ಸ್ವತ್ತನ್ನು ಖರೀದಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನಿಪಿ1 ರ ಸ್ಟ್ಯಾಪ್ ಪತ್ರವನ್ನು ನಾನೇ ಖರೀದಿ ಮಾಡಿ ಕೊಟ್ಟಿರುತ್ತೇನೆ ಅದರಲ್ಲಿ ಸ್ಟ್ಯಾಪ್ ವೆಂಡರ್ ದಿಃ 08.12.1992 ರಂದು ಸಹಿ ಮಾಡಿದ್ದಾರೆ ಎಂದರೆ ಸರಿ. ನಿಪಿ1 ರಲ್ಲಿ ಸದರಿ ಸರ್ಟಿಫಿಕೇಟ್ ನ್ನು 1985 ರಂದು ನೀಡಿರುವುದಾಗಿ ನಮೂದು ಇದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿಗೆ 5ನೇ ಪ್ರತಿವಾದಿ ಮಾತ್ರ ಮೂಲ ಮಾಲೀಕರು ಎಂದರೆ ಸರಿಯಲ್ಲ. 5ನೇ ಪ್ರತಿವಾದಿ ದಿಃ 24.01.2002 ರಲ್ಲಿ 6ನೇ ಪ್ರತಿವಾದಿಗೆ ಕ್ರಯ ಮಾಡಿ ಅದರ ಸ್ವಾಧೀನವನ್ನು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಅವರು ಮಾರಾಟ ಮಾಡಿರಬಹುದು ಎಂದು ನುಡಿಯುತ್ತಾರೆ.

ನಂತರ 6ನೇ ಪ್ರತಿವಾದಿ ದಿಃ 29.06.2018 ರಂದು ಕೆ.ಎನ್. ಕೃಷ್ಣರವರಿಗೆ ಜಿಪಿಎ ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ತದನಂತರ 6ನೇ ಪ್ರತಿವಾದಿಯ ಜಿಪಿಎದಾರರಾದ ಕೃಷ್ಣರವರು 7ನೇ ಪ್ರತಿವಾದಿ ದಿಃ 01.10.2018 ರಂದು ಶುದ್ಧ ಕ್ರಯಕ್ಕೆ ಬರೆದುಕೊಟ್ಟು ದಾವಾ ಸ್ವತ್ತಿನ ಸ್ವಾಧೀನವನ್ನು ಬಿಟ್ಟುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 7ನೇ ಪ್ರತಿವಾದಿ ತಮ್ಮ ಹೆಸರಿಗೆ ಖಾತಾ ಮಾಡಿಸಿಕೊಂಡು, ಸ್ವಾಧೀನಾನುಭವದಲ್ಲಿರುವುದು ನನ್ನ ಗಮನಕ್ಕೆ ಬಂತು. 7ನೇ ಪ್ರತಿವಾದಿ ದಿಃ 14.09.2019 ರಲ್ಲಿ 8ನೇ ಪ್ರತಿವಾದಿ ಹೆಸರಿಗೆ ಕ್ರಯದ ಕರಾರನ್ನು ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿಃ 14.10.2019 ರಲ್ಲಿ 7ನೇ ಪ್ರತಿವಾದಿ 8ನೇ ಪ್ರತಿವಾದಿ ಹೆಸರಿಗೆ ಶುದ್ಧ ಕ್ರಯ ಪತ್ರ ಬರೆದುಕೊಟ್ಟು ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದರೆ ಅವರು ಮಾಡಿಕೊಂಡಿರಹುದು ಎಂದು ನುಡಿಯುತ್ತಾರೆ. ಸದರಿ ದಿನಾಂಕದಿದ 8ನೇ ಪ್ರತಿವಾದಿ ಸ್ವಾಧೀನದಲ್ಲಿ ಇದ್ದು ಅವರೇ ಕಂದಾಯ ಕಟ್ಟುತ್ತಿದ್ದಾರೆ ಎಂದರೆ ಸರಿ. 8ನೇ ಪ್ರತಿವಾದಿಯನ್ನು ಹೊರತುಪಡಿಸಿ ಬೇರೆ ಯಾರಿಗೂ ದಾವಾ ಸ್ವತ್ತಿನ ಮೇಲೆ ಹಕ್ಕು ಮತ್ತು ಹಿತಾಸಕ್ತಿ ಇಲ್ಲ ಎಂದರೆ ಸಾಕ್ಷಿ ನನ್ನ ಬಳಿ ಹಕ್ಕು ಪತ್ರ ಇದ್ದು, ಬೇರೆ ದಾಖಲೆ ಇಲ್ಲ ಎಂದು ನುಡಿಯುತ್ತಾರೆ.

ನಾನು ಲೋಕಯುಕ್ತಕ್ಕೆ ದೂರು ನೀಡಿದ್ದು, ಆ ದೂರಿನ ಅನ್ವಯ ಬದಲಿ ನಿವೇಶನ ಸಂಖ್ಯೆ: 276 ನ್ನು ನೀಡುವಂತೆ ಆದೇಶ ಮಾಡಿರುತ್ತಾರೆ. ಸದರಿ ಆದೇಶ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಯಾವ ಇಸವಿಯಲ್ಲಿ ಆದೇಶವಾಗಿದೆ ಎಂದು ನನಗೆ ನೆನಪಿಲ್ಲ. ನಾನು ಪ್ರತಿವಾದಿ 1 ರಿಂದ 4 ರವರಿಗೆ ಕಲಂ.80(2) ರಡಿ ನೋಟೀಸ್ ನೀಡಿದ್ದಾಗ ದಾವಾ ಸ್ವತ್ತು 8ನೇ ಪ್ರತಿವಾದಿಯ ಮಾಲೀಕತ್ವ ಮತ್ತು ಸ್ವಾಧೀನದಲ್ಲಿ ಇತ್ತು ಎಂದರೆ ಸರಿ. ನಿಪಿ1ನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಕಂದಾಯ ರಶೀದಿಗಳನ್ನು ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಮೋಸ ಮಾಡುವ ಸಲುವಾಗಿ ಸುಳ್ಳು ದಾವೆ ದಾಖಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಗಿರೀಶ ಆರ್.ಬಿ)**
ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಗುಂಡ್ಲುಪೇಟೆ